ಮೂಲ ದಾವಾ ಸಂಖ್ಯೆ. 160/2023 ಪಿ ಡಬ್ಲ್ಯೂ 1

(ದಿನಾಂಕ 15-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ಎಂ ಕೆ ವಕೀಲರಿಂದಃ-

ನಾನು ವಾದಿ ಬ್ಯಾಂಕಿನಲ್ಲಿ ಸುಮಾರು 2 ವರೆ ವರ್ಷದಿಂದ ಬ್ಯಾಂಕ್ ಮೇನೇಜರ್ ಅಂತಾ ಕೆಲಸ ಮಾಡುತ್ತಿದ್ದೇನೆ. ವಾದಿ ಬ್ಯಾಂಕಿನವರು ಈ ದಾವೆಯನ್ನು ಪ್ರತಿವಾದಿಯರ ಮೇಲೆ ವಾಹನ ಸಾಲ ಮರುಪಾವತಿಗಾಗಿ ದಾಖಲಿಸಿದ್ದಾರೆ. ನನ್ನ ಸಾಕ್ಷ್ಯ ಪ್ರಮಾಣಪತ್ರ ಮತ್ತು ವಾದಪತ್ರದಲ್ಲಿರುವ ವಿಚಾರವನ್ನು ನಾನು ತಿಳಿದುಕೊಂಡಿದ್ದೇನೆ. ನಾನು ವಾದಪತ್ರ ಮತ್ತು ಸಾಕ್ಷ್ಯ ಪ್ರಮಾಣಪತರದಲ್ಲಿರುವ ವಿಚಾರವನ್ನು ಹೇಳಿ ಬರೆಸಿದ್ದೇನೆ. ಈ ದಾವೆಯ ಪ್ರತಿವಾದಿಯರು ಗುಡುದೇಶ ಮತ್ತು ದೇವಪ್ಪ ಇರುತ್ತಾರೆ.

ಪ್ರತಿವಾದಿಯರು ದಿಃ13-08-2018 ರಂದು ನಮ್ಮ ಬ್ಯಾಂಕಿಗೆ ವಾಹನ ಸಾಲಕ್ಕಾಗಿ ಬಂದಿದ್ದರು. ಬ್ಯಾಂಕಿನಲ್ಲಿ ಅದೇ ದಿನ ರೂ.4.43 ಲಕ್ಷ ಬ್ಯಾಂಕ್ ಸಾಲವನ್ನು ಮಂಜೂರು ಮಾಡಲಾಯಿತು. ವೆಹಿಕಲ್ ಕೊಟೇಶನ್ ಆಧಾರದ ಮೇಲೆ ಅಷ್ಟೇ ಮೊತ್ತದ ಸಾಲವನ್ನು ಮಂಜೂರು ಮಾಡಲಾಯಿತು. ಸದರಿ ಕೊಟೇಶನ್ 1ನೇ ಪ್ರತಿವಾದಿ ತಂದಿದ್ದ ಅಥವಾ ಯಾವುದಾದರೂ ಬ್ಯಾಂಕಿನಿಂದ ಬಂದಿತ್ತು ಎನ್ನುವುದು ನನಗೆ ನೆನಪಿಲ್ಲ. ಸದರಿ ಕೊಟೇಶನ್ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ಬ್ಯಾಂಕಿನಿಂದ ನಾವು ಒಂದು ನೋಟೀಸನ್ನು 1ನೇ ಪ್ರತಿವಾದಿಗೆ ನೀಡಿರುತ್ತೇವೆ ಮತ್ತು ವಕೀಲರ ಮೂಲಕವೂ ಸಹಾ ಒಂದು ನೋಟೀಸನ್ನು ಪ್ರತಿವಾದಿಗಳಿಗೆ ನೀಡಿರುತ್ತೇವೆ ಅವುಗಳ ದಿನಾಂಕ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಸನ್ 2023 ರಲ್ಲಿ ನಾನು ಬ್ಯಾಂಕಿನಲ್ಲಿ ಪ್ರಭಾರ ಪಡೆದ ನಂತರ ಹಣ ಮರುಪಾವತಿಗಾಗಿ ಪ್ರತಿವಾದಿಯರಿಗೆ ನೋಟೀಸ್ ನೀಡಿರುತ್ತೇನೆ ಅದಕ್ಕಿಂತ ಪೂರ್ವದಲ್ಲಿಯೂ ಸಹಾ ನಮ್ಮ ಬ್ಯಾಂಕಿನ ಅಧಿಕಾರಿಗಳು ನೋಟೀಸ್ ನೀಡಿರುತ್ತಾರೆ. ನಾನು ಬರುವುದಕ್ಕಿಂತ ಪೂರ್ವದಲ್ಲಿ ನಮ್ಮ ಬ್ಯಾಂಕಿನವರು ಪ್ರತಿವಾದಿಯರಿಗೆ ಯಾವುದೇ ನೋಟೀಸ್ ನೀಡಿಲ್ಲ ಆ ಕಾರಣದಿಂದ ನಾನು ಅವುಗಳನ್ನು ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ. ದಿಃ13-08-2018 ರಂದು ಪ್ರತಿವಾದಿಯರು ನಮ್ಮ ಬ್ಯಾಂಕ್ ದಾಖಲೆಗಳಿಗೆ ಸಹಿ ಮಾಡಿರುತ್ತಾರೆಂದರೆ ಸರಿ. ನಿಪಿ-7 ರಿವೈವಲ್ ಲೆಟರಿಗೆ ಅದೇ ದಿನವೇ ಪ್ರತಿವಾದಿಯರು ಸಹಿ ಮಾಡಿರುತ್ತಾರೆಂದರೆ ಸಾಕ್ಷಿಯು ದಿಃ19-07-2021 ರಲ್ಲಿ ಸಹಿ ಮಾಡಿರುತ್ತಾರೆನ್ನುತ್ತಾರೆ. ಸದರಿ ನಿಪಿ-7 ದಾಖಲೆ ಬರೆದುಕೊಡಲು ನಮ್ಮ ಬ್ಯಾಂಕಿನವರು ಪ್ರತಿವಾದಿಯರಿಗೆ ಯಾವುದೇ ನೋಟೀಸ್ ಬರೆದುಕೊಟ್ಟಿಲ್ಲ. ದಿಃ19-07-2021 ರಂದು ಪ್ರತಿವಾದಿಯರು ನಿಪಿ-7 ದಾಖಲೆಗಳಿಗೆ ಸಹಿ

ಮಾಡಿರುವುದಿಲ್ಲ ಅವರು ಸಾಲ ಪಡೆದ ದಿನವೇ ಸದರಿ ದಾಖಲೆಗೆ ಅವರ ಸಹಿ ಪಡೆದು ಸದರಿ ದಾಖಲೆಯನ್ನು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. ಈ ಪ್ರಕರಣದ ಕಾಲಮಿತಿ ಮೀರುತ್ತದೆನ್ನುವ ಕಾರಣದಿಂದ ನೋಟೀಸ್ ನಿಪಿ-8 ಮತ್ತು 10 ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಯರು ಎಷ್ಟು ಮೊತ್ತವನ್ನು ಮರುಪಾವತಿ ಮಾಡಿರುತ್ತಾರೆನ್ನುವುದನ್ನು ನನ್ನ ವಾದ ಪತ್ರ ಮತ್ತು ಸಾಕ್ಷ್ಯ ಪ್ರಮಾಣಪತ್ರದಲ್ಲಿ ನಮೂದಿಸಿರುವುದಿಲ್ಲ ಆದರೆ ಸ್ಟೇಟ್ ಮೆಂಟ್ ಹಾಜರುಪಡಿಸಿದ್ದೇನೆ. ಸದರಿ ಸ್ಟೇಟ್ ಮೆಂಟನ್ನು ನಾನು ಹಾಜರುಪಡಿಸಿರುತ್ತೇನಂತಾ ನನ್ನ ವಾದಪತ್ರದಲ್ಲಿ ಬರೆದಿರುವುದಿಲ್ಲವೆಂದರೆ ಸರಿ. ಪ್ರತಿವಾದಿಯು ರೂ.2,85,197/- ಗಳನ್ನು ಮರುಪಾವತಿ ಮಾಡಬೇಕು ಅಂತಾ ವಾದಪತ್ರದಲ್ಲಿ ತೋರಿಸಿರುತ್ತೇನೆಂದರೆ ಸರಿ.

ದಿಃ13-08-2018 ರಂದು ಪ್ರತಿವಾದಿಯರಿಗೆ ರೂ.4,43,000/- ಗಳು ನಮ್ಮ ಬ್ಯಾಂಕಿನಿಂದ ಸಾಲ ಮಂಜೂರಾಗಿದೆ ಎಂದರೆ ಸರಿ. ದಿಃ11-09-2018 ರಿಂದ 23-12-2019 ರವರೆಗೆ ಪ್ರತಿವಾದಿಯರು ರೂ.1,57,202/- ಗಳ ಹಣವನ್ನು ಖಾತೆಯ ಮೂಲಕ ನಮ್ಮ ಬ್ಯಾಂಕಿಗೆ ಪಾವತಿಸಿದ್ದಾರೆಂದರೆ ಸರಿ. ದಿಃ 13-01-2020 ರಿಂದ 13-05-2022 ರವರೆಗೆ ರೂ.26,532/-ಗಳನ್ನು ತಮ್ಮ ಬ್ಯಾಂಕ್ ಖಾತೆ ಮೂಲಕ ಕಟ್ಟಿದ್ದಾರೆಂದರೆ ಸರಿ. ದಿಃ 16-06-2022 ರಂದು ಪ್ರತಿವಾದಿಯು ರೂ.12,581/- ಗಳನ್ನು ನಮ್ಮ ಬ್ಯಾಂಕಿಗೆ ಮರುಪಾವತಿ ಮಾಡಿದ್ದಾನೆಂದರೆ ಸರಿ. ದಿಃ24-08-2023 ರಂದು ವಾಹನ ಹರಾಜಿನ ಮೂಲಕ ಬಂದ ರೂ.2,65,000/- ಹಣ ಪ್ರತಿವಾದಿಯ ಸಾಲಕ ಖಾತೆಗೆ ಜಮಾ ಆಗಿರುತ್ತದೆಂದರೆ ಸರಿ. ಒಟ್ಟು ರೂ.4,61,315/- ಗಳು ಪ್ರತಿವಾದಿಯ ಸಾಲದ ಖಾತೆಗೆ ಜಮಾ ಆಗಿರುತ್ತದೆಂದರೆ ಸರಿ. ವಾದಪತ್ರದಲ್ಲಿ ಸದರಿ ಮೊತ್ತ ಮರುಪಾವತಿಯಾದ ಬಗ್ಗೆ ತಿಳಿಸಿರುವುದಿಲ್ಲವೆಂದರೆ ಸರಿ. ಸದರಿ ಹಣವನ್ನು ಲೆಕ್ಕ ಮಾಡಿದರೆ ರೂ.18,315/- ಗಳು ನಮ್ಮ ಬಳಿ ಜಮಾ ಇದೆ ಎಂದರೆ ಸರಿಯಲ್ಲ.

ಸನ್ 2019 ರಲ್ಲಿ ಕೊರೋನಾ ಖಾಯಿಲೆ ಬಂತು ಎಂದರೆ ಸರಿ. ಸನ್ 2020 ರಲ್ಲಿ ಕೊರೋನಾ ಖಾಯಿಲೆ ನಮ್ಮ ದೇಶಕ್ಕೂ ಹಬ್ಬಿತ್ತು ಎಂದರೆ ಸರಿ. ದಿಃ25-03-2023 ರಂದು ದೇಶದಲ್ಲಿ ಕೋರೋನಾ ಲಾಕ್ ಡೌನ್ ಘೋಷಣೆಯಾಯಿತು ಎಂದರೆ ಸರಿ. ಸದರಿ ಲಾಕ್ ಡೌನ್ ಸಮಯದಲ್ಲಿ ಎಲ್ಲಾ ವ್ಯಾಪಾರ ವಹಿವಾಟು ಸ್ಥಗಿತವಾಗಿತ್ತು ಎಂದರೆ ಸರಿ. ಪ್ರತಿವಾದಿಯರು ತಾವು ಮರುಪಾವತಿ ಮಾಡಬೇಕಾಗಿದ್ದ ಮೊತ್ತಕ್ಕಿಂತ ಹೆಚ್ಚಿಗೆ ಮೊತ್ತವನ್ನು ನಮ್ಮ ಬ್ಯಾಂಕಿಗೆ ಮರುಪಾವತಿ ಮಾಡಿದ್ದು ಅನಾವಶ್ಯಕವಾಗಿ ನಾವು ಪ್ರತಿವಾದಿಯರ ವಾಹನವನ್ನು ಸೀಜ್

ಮಾಡಿರುತ್ತೇವೆಂದರೆ ಸರಿಯಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ ಯಾವುದೇ ಒಂದು ವಸ್ತುವಿನಿಂದ ಆದಾಯ ಬರುವುದಿದ್ದರೆ ಆ ವಸ್ತು ಅವನ ಬಳಿ ಇರುವುದಿಲ್ಲವೆಂದರೆ ಅವನಿಗೆ ಆದಾಯ ಬರುವುದಿಲ್ಲವೆಂದರೆ ಸರಿ. ಸದರಿ ವಾಹನವನ್ನು ನಾವು ಸೀಜ್ ಮಾಡಿರುವುದರಿಂದ ಪ್ರತಿವಾದಿಯರಿಗೆ ಆದಾಯ ಇಲ್ಲದೇ ನಮ್ಮ ಬ್ಯಾಂಕಿಗೆ ಬಡ್ಡಿ ಹಣವನ್ನು ಕಟ್ಟಲು ಸಾಧ್ಯವಾಗಿರುವುದಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿಯ ವಾಹನ ಹರಾಜಿನ ಸಮಯದಲ್ಲಿ ರೂ.4 ರಿಂದ 4.5 ಲಕ್ಷ ಬೆಲೆ ಬಾಳುತ್ತಿತ್ತು ಅದನ್ನು ನಾವು ಕಡಿಮೆ ಬೆಲೆಗೆ ಹರಾಜು ಮಾಡಿರುತ್ತೇವೆಂದರೆ ಸರಿಯಲ್ಲ. ಸದರಿ ವಾಹನ 4 ರಿಂದ 4.5 ಲಕ್ಷ ಬೆಲೆ ಬಾಳುತ್ತಿತ್ತು ಸದರಿ ವಾಹನದ ಮೌಲ್ಯಮಾಪನ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ. ನಾವು ವೆಹಿಕಲ್ಲನ್ನು ಜಪ್ತಿ ಮಾಡಿರುವುದು ಮತ್ತು ಪೇಪರ್ ಜಾಹಿರಾತು ಕೊಟ್ಟಿರುವುದನ್ನು ಮತ್ತು ವಾಹನ ಹರಾಜು ಮಾಡಿರುವ ವಿಚಾರವನ್ನು ನನ್ನ ವಾದಪತ್ರದಲ್ಲಿ ಬರೆಸಿಲ್ಲ. ಈ ವಿಚಾರ ಗೊತ್ತಾಗುತ್ತದಂತಾ ಹೇಳಿ ಅವುಗಳನ್ನು ವಾದಪತ್ರಗಳಲ್ಲಿ ಬರೆಸದೇ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯರು ನಮಗೆ ಯಾವುದೇ ಹಣ ಪಾವತಿಸುವುದು ಬಾಕಿ ಇಲ್ಲ ಪ್ರತಿವಾದಿ ಇನ್ನೂ ಹೆಚ್ಚು ಹಣ ನಮಗೆ ಪಾವತಿ ಮಾಡಿರುತ್ತಾನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬಡ್ಡಿ ಹಣ ಮತ್ತು ಅಸಲು ಲೆಕ್ಕ ಮಾಡಿದ ನಂತರ ಅಷ್ಟು ಪಾವತಿಸಬೇಕಾಗುತ್ತದೆನ್ನುತ್ತಾರೆ. ಪ್ರತಿವಾದಿಯು ನಮ್ಮ ಬ್ಯಾಂಕಿಗೆ ಜಮಾ ಮಾಡಿರುವಂತಹ ಹಣದ ಮೇಲೆ ಬಡ್ಡಿ ಹಾಕಿದರೂ ಸಹಾ ಬ್ಯಾಂಕಿನವರೇ ಪ್ರತಿವಾದಿಯವರಿಗೆ ಹಣ ಕೊಡಬೇಕಾಗುತ್ತದೆಂದರೆ ಸುಳ್ಳು. ಪ್ರತಿವಾದಿಯು ನಮ್ಮ ಬ್ಯಾಂಕಿಗೆ ಈಗಾಗಲೇ ಹೆಚ್ಚಿನ ಮೊತ್ತವನ್ನು ಮರುಪಾವತಿ ಮಾಡಿದ್ದು ಯಾವುದೇ ಹಣವನ್ನು ನಮ್ಮ ಬ್ಯಾಂಕಿಗೆ ಮರುಪಾವತಿ ಮಾಡಲು ಬಾಧ್ಯಸ್ಥರು ಇರುವುದಿಲ್ಲ ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ರಿವೈವಲ್ ಲೆಟರ್ ಮತ್ತು ನೋಟೀಸುಗಳನ್ನು ಈ ದಾವೆ ದಾಖಲಿಸುವ ಸಲುವಾಗಿ ಸೃಷ್ಟಿ ಮಾಡಿದ ದಾಖಲೆಗಳಿರುತ್ತವೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ